"ಮಧುರ ಮಕ್ಕಳೇ - ತಾವು ಪುರುಷಾರ್ಥವನ್ನು ಮಾಡಿ ಏಯರ್ಕಂಡೀಷನ್ (ಹವಾನಿಯಂತ್ರಣದ) ಟಿಕಟ್ನ್ನು ಖರೀದಿ ಮಾಡಬೇಕು, ಹವಾನಿಯಂತ್ರಣದ ಟಿಕೆಟ್ ಪಡೆಯುವುದೆಂದರೆ ಅರ್ಥ ಮಾಯೆಯ ಬಿಸಿಗಾಳಿ ಅಥವಾ ಯುದ್ಧದಿಂದ ಸುರಕ್ಷಿತವಾಗಿರುವುದು"

ಪ್ರಶ್ನೆ: ತಾವು ಮಕ್ಕಳಿಗೆ ಮಹಾವಿನಾಶದ ದುಃಖವಾಗುವುದೋ ಅಥವಾ ಇಲ್ಲವೋ? ಇದರ ಪಾಪ ಯಾರ ಮೇಲೆ ಬರುತ್ತದೆ?

ಉತ್ತರ: ತಮಗೆ ಮಹಾವಿನಾಶದ ದುಃಖವಾಗಲು ಸಾಧ್ಯವಿಲ್ಲ ಏಕೆಂದರೆ ತಾವು ಫರಿಸ್ಥೆಗಳಾಗುತ್ತೀರಿ. ತಮಗೆ ಈಗ ಸರ್ವ ಆತ್ಮಗಳು ಸೊಳ್ಳೆಗಳ ರೀತಿ ವಾಪಸ್ ಹೋಗುತ್ತಾರೆಂಬ ಜ್ಞಾನವಿದೆ. ತಮಗೆ ಯಾರದೇ ಮೃತ್ಯುವಿನ ಬಗ್ಗೆ ದುಃಖವಾಗುವುದಿಲ್ಲ ಏಕೆಂದರೆ ತಾವು ಸಾಕ್ಷಿಯಾಗಿ ನೋಡುತ್ತೀರಿ, ತಮಗೆ ಗೊತ್ತಿದೆ - ಆತ್ಮವು ಸದಾ ಅಮರವಾಗಿದೆ. ಈ ವಿನಾಶದ ಪಾಪ ಯಾರ ಮೇಲೂ ಬರುವುದಿಲ್ಲ. ಇದು ಯುದ್ಧದ ಯಜ್ಞವನ್ನು ರಚಿಸಿದಂತೆ. ಎಲ್ಲರೂ ಯುದ್ಧ ಮಾಡಿ ಸತ್ತು ವಾಪಸ್ ಮನೆಗೆ ಹೋಗುತ್ತಾರೆ. ಇದೂ ಸಹ ಡ್ರಾಮಾದ ಲೀಲೆಯಾಗಿದೆ.

ಗೀತೆ: ಮಹಾಸಭೆಯಲ್ಲಿ ಪರಂಜ್ಯೋತಿ ಬೆಳಗಿತು...........

ಓಂ ಶಾಂತಿ. ಮಕ್ಕಳು ಗೀತೆಯ ಒಂದು ಸಾಲನ್ನು ಕೇಳಿದಿರಿ. ಈ ಸಭೆ ಯಾರದು? ಜ್ಞಾನಸಾಗರನದು. ಇದಕ್ಕೆ ಮತ್ತೆ ಮನುಷ್ಯರು ಇಂದ್ರನ ಸಭೆ ಎಂದು ಹೇಳುತ್ತಾರೆ. ಇದು ಜ್ಞಾನಸಾಗರ ಪರಮಪಿತ ಪರಮಾತ್ಮನ ಸಭೆಯಾಗಿದೆ, ಇದರಲ್ಲಿ ಬದುಕ್ಕಿದ್ದಂತೆಯೇ ಇವರವರಾಗುವುದು ಅಂದರೆ ಅರ್ಥ ಜಗತ್ತಿನಿಂದ ಸಾಯುವುದು ಪತಂಗಗಳು ಕುಳಿತಿದ್ದಾರೆ ಏಕೆಂದರೆ ಜೀವಾತ್ಮಗಳಿಗೆ ಈ ಹಳೆಯ ಜಗತ್ತು ಇಷ್ಟವಿಲ್ಲ ಎಂಬುದು ನಿಮಗೆ ಗೊತ್ತಿದೆ. ಇದರಲ್ಲಿ ಒಬ್ಬರಿಗೊಬ್ಬರು ಯುದ್ಧ ಮಾಡುತ್ತಲೇ ಇರುತ್ತಾರೆ. ತಂದೆ ಹೇಳುತ್ತಾರೆ - ನಾನು ಸ್ವರ್ಗದ ಸ್ಥಾಪನೆ ಮಾಡುತ್ತೇನೆ. ಮಕ್ಕಳಲ್ಲಿಯೂ ನಂಬರ್ವಾರ್ ಆಗಿದ್ದಾರೆ. ಕೆಲವರು ಪುಖ್ರಾಜ್ಪರಿ, ಕೆಲವರು ನೀಲಂ ಪರಿ ಹೆಸರಂತೂ ಬಹಳ ಇದೆ. ಇದು ಹೋಲಿಕೆ ಮಾಡಲಾಗದು. ಕೆಲವು ಮಕ್ಕಳು ಬುದ್ಧಿವಂತರಾಗಿ ಅನ್ಯರ ಸರ್ವೀಸಿನಲ್ಲಿ ತೊಡಗುತ್ತಾರೆ. ಸರ್ವೀಸಿನಲ್ಲಿಯೂ ಯಾರು ತೊಡಗಲು ಸಾಧ್ಯ? ಯಾರು ಜ್ಯೋತಿಗೆ ಪೂರ್ಣ ಅರ್ಪಣೆಯಾಗುತ್ತಾರೆಯೋ ಅವರು. ಇದು ಬಹಳ ದೊಡ್ಡ ಸಭೆಯಾಗಿದೆ. ಬಾಬಾ ಆತ್ಮಗಳ ಸಭೆಯಲ್ಲಿ ಬಂದಿದ್ದಾರೆ ಎಂಬುದು ನಿಮಗೆ ಗೊತ್ತಿದೆ. ಆದರೆ ಯಾರು ಇವರನ್ನು ಚೆನ್ನಾಗಿ ತಿಳಿದುಕೊಳ್ಳುತ್ತಾರೆಯೋ ಅವರು ಇವರ ಸಮ್ಮುಖದಲ್ಲಿ ಪ್ರತ್ಯಕ್ಷವಾಗಿದ್ದಾರೆ. ಈ ಸಮಯದಲ್ಲಿ ಕೋಟಿಯಲ್ಲಿ ಕೆಲವರು ಮಾತ್ರ ತಿಳಿದುಕೊಂಡಿದ್ದಾರೆ. ಯಾರು ಪತಂಗಗಳಾಗಿದ್ದಾರೆಯೋ ಅವರೇ ತಿಳಿದುಕೊಂಡಿದ್ದಾರೆ, ಅವರೇ ಅರ್ಪಣೆಯಾಗುತ್ತಾರೆ, ಬಾಬಾರವರ ಮಕ್ಕಳಾಗುತ್ತಾರೆ.

ಇದಂತೂ ತಿಳಿಸಲಾಗಿದೆ - ಇದು ಬದುಕಿದ್ದು ಸಾಯುವುದಾಗಿದೆ. ಬಾಬಾ, ನಾವು ತಮ್ಮವರಾಗಿದ್ದೇವೆ. ನಾವು ಮೊದಲು ನಿಮ್ಮ ಬಳಿ ಅಶರೀರಿಗಳಾಗಿರುತ್ತೇವೆ ಮತ್ತೆ ಇಲ್ಲಿ ಬಂದು ಶರೀರವನ್ನು ಪಡೆಯುತ್ತೇವೆ. ಮಕ್ಕಳಿಗೆ ಯಾವುದೆಲ್ಲಾ ಜ್ಞಾನ ಸಿಗುತ್ತದೆ ಇದನ್ನು ಬೇರೆ ಯಾರೂ ಹೇಳಲು ಸಾಧ್ಯವಿಲ್ಲ ಏಕೆಂದರೆ ತಂದೆಯನ್ನೇ ತಿಳಿದುಕೊಂಡಿಲ್ಲ. ನಾವು ಮಕ್ಕಳಿಗೆ ಪರಮಪಿತ ಪರಮಾತ್ಮ ಬಂದು ಓದಿಸುತ್ತಿದ್ದಾರೆ. ಗಾಯನವಿದೆ - ಎಲ್ಲಾ ವೇದ-ಶಾಸ್ತ್ರ ಮುಂತಾದವುಗಳು ಗೀತೆಯ ಎಲೆಗಳಾಗಿವೆ. ಎಲ್ಲಾ ಮನುಷ್ಯರು ಈ ಮಂಟಪದಲ್ಲಿ ಯಾವ ಎಲೆಗಳು? ಈ ದೇವೀ-ದೇವತಾ ಧರ್ಮದಿಂದಲೇ ಎಲ್ಲರೂ ಬಂದಿದ್ದಾರೆ, ಆದ್ದರಿಂದ ತಾವು ವೃಕ್ಷದ ಚಿತ್ರದಲ್ಲಿ ಪ್ರಾರಂಭದಲ್ಲಿ ಎಲೆಗಳು ಇಲ್ಲದಿರುವುದನ್ನು ನೋಡುತ್ತೀರಿ. ಎಲೆಗಳು ನಂತರವೇ ಬರುತ್ತವೆ ಅಂದಮೇಲೆ ಅವರನ್ನು ಮೇಲೆ ತೋರಿಸಲಾಗಿದೆ. ದೇವೀ-ದೇವತಾ ಧರ್ಮವು ತಳಪಾಯವಾಗಿದೆ. ಮೊದಲು ಒಂದೇ ಬೇರು ಇರುತ್ತದೆ ನಂತರ ಅದರಿಂದ ರೆಂಬೆ-ಕೊಂಬೆಗಳು ಹರಡುತ್ತವೆ. ನಂತರ ಎಲೆಗಳು. ಇದು ವಿರಾಟ ಮನುಷ್ಯರ ಸೃಷ್ಟಿಯ ಧರ್ಮಗಳ ವೃಕ್ಷವಾಗಿದೆ ಎಂಬುದು ನೀವು ಮಕ್ಕಳ ಬುದ್ಧಿಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ಸರಕಾರ ಧರ್ಮವನ್ನು ಒಪ್ಪುವುದಿಲ್ಲ. ನಾವೆಲ್ಲರೂ ಪರಸ್ಪರರಲ್ಲಿ ಒಂದಾಗಿರುತ್ತೇವೆ ಎಂದು ಹೇಳುತ್ತಾರೆ, ಆದರೆ ಪರಸ್ಪರರಲ್ಲಿ ಎಷ್ಟೊಂದು ಘರ್ಷಣೆ ಇದೆ, ಪರಸ್ಪರರಲ್ಲಿ ಯುದ್ಧವು ನಡೆಯುತ್ತಲೇ ಇರುತ್ತದೆ. ಯುದ್ಧದ ಯಜ್ಞವು ರಚನೆ ಆದಂತೆ ಇದೆ. ಎಲ್ಲರೂ ಒಂದಲ್ಲ ಒಂದು ಕಡೆ ಯುದ್ಧ ಮಾಡುತ್ತಲೇ ಇರುತ್ತಾರೆ. ಇದೂ ಸಹ ಡ್ರಾಮಾದಲ್ಲಿ ನಿಗದಿಯಾಗಿದೆ. ಪರಸ್ಪರರಲ್ಲಿ ಯುದ್ಧ ಮಾಡಿ ಸಾಯಲು ಯುಕ್ತಿಯನ್ನು ರಚಿಸುತ್ತಿರುತ್ತಾರೆ. ಮೊದಲು ಹಿಂದೂಸ್ಥಾನ, ಪಾಕಿಸ್ತಾನ ಬೇರೆ-ಬೇರೆ ಆಗಿರಲಿಲ್ಲ. ಎಲ್ಲರೂ ಒಟ್ಟಿಗೆ ಇದ್ದರು. ಸರ್ಕಾರವೂ ಸಹ ಶಕ್ತಿಶಾಲಿ ಆಗಿತ್ತು. ಪರಸ್ಪರರಲ್ಲಿ ಯಾರೂ ಯುದ್ಧ ಮಾಡುತ್ತಿರಲಿಲ್ಲ ಏಕೆಂದರೆ ಅವರಿಗಿಂತ ಮೇಲೆ ದೊಡ್ಡ-ದೊಡ್ಡ ನವಾಬರಿರುತ್ತಿದ್ದರು. ಹೇಗೆ ಈಗಲೂ ಪೂರ್ಣ ಜಗತ್ತಿಗೆ ವಿಶ್ವ ಸಂಸ್ಥೆಯ ರೀತಿ ದೊಡ್ಡ-ದೊಡ್ಡ ಕಮಿಟಿಗಳು ಇವೆ ಆದರೆ ಇವರೆಲ್ಲರಿಗೂ ಧಣಿ, ಧೋಣಿ ಯಾರೂ ಇಲ್ಲ. ಎರಡು ಭಾಗ ಆಗಿಬಿಟ್ಟಿದೆ. ದುಃಖವು ವೃದ್ಧಿ ಆಗುತ್ತಲೇ ಇರುತ್ತದೆ, ಒಬ್ಬರಿಗೊಬ್ಬರು ಸಾಯಿಸುತ್ತಲೇ ಇರುತ್ತಾರೆ. ಡ್ರಾಮಾದಲ್ಲಿ ಎಂತಹ ರಹಸ್ಯವಿದೆ ನೋಡಿ, ಪರಸ್ಪರರಲ್ಲಿ ಯುದ್ಧ ಮಾಡಿದರೆ ತಂದೆಯ ಮೇಲೆ ಪಾಪ ಬರುತ್ತದೆಯೇ. ನಾವು ಸಾಕ್ಷಿಯಾಗಿ ನೋಡುತ್ತೇವೆ. ತಮಗೆ ಗೊತ್ತಿದೆ -

ಎಲ್ಲರೂ ಯುದ್ಧ ಮಾಡಿ ಸಮಾಪ್ತಿ ಆಗಿಯೇ ಆಗುತ್ತಾರೆ. ಯಾರಾದರೂ ದೊಡ್ಡವ್ಯಕ್ತಿ ಸತ್ತರೆ 8-10 ದಿನ ಅವರಿಗಾಗಿ ಅಲ್ಪ-ಸ್ವಲ್ಪ ಕಾರ್ಯಕ್ರಮ ನಡೆಯುತ್ತಲೇ ಇರುತ್ತದೆ. ರಜಾ, ಇತ್ಯಾದಿಗಳನ್ನು ಕೊಡುತ್ತಾ ಇರುತ್ತಾರೆ. ನಿಮಗಾಗಿ ಏನೂ ಇಲ್ಲ. ನೀವು ಫರಿಸ್ಥೆಗಳು ಆಗುತ್ತಿದ್ದೀರಿ. ತಮಗೆ ವಿನಾಶದ ದುಃಖವೂ ಆಗುವುದಿಲ್ಲ. ಈಗ ಸೊಳ್ಳೆಗಳ ರೀತಿ ಎಲ್ಲರೂ ಸಾಯುತ್ತಾರೆ. ಮತ್ತೆ ಯಾರು ಯಾರನ್ನು ನೋಡುತ್ತಾರೆ, ಈ ರಹಸ್ಯ ತಾವು ಮಕ್ಕಳಿಗೆ ಗೊತ್ತಿದೆ ಹೊಸ ಜಗತ್ತಿನಲ್ಲಿ ಇರುವವರು ಬಹಳ ಚೆನ್ನಾಗಿರುವವರು ಬೇಕು. ಇಲ್ಲಿ ಯಾರಾದರೂ ಸತ್ತರೆ ನಿಮಗೆ ದುಃಖವಾಗುತ್ತದೆಯೇ. ಇವರು ಹೋಗಿ ತಮ್ಮ ಪಾತ್ರವನ್ನು ಅಭಿನಯಿಸಲು ಇನ್ನೊಂದು ಶರೀರವನ್ನು ಪಡೆದರು ಎಂದು ನೀವು ಸಾಕ್ಷಿಯಾಗಿ ನೋಡುತ್ತೀರಿ. ನಿಮ್ಮಲ್ಲಿಯೂ ಎಲ್ಲರೂ ನಿಶ್ಚಯಬುದ್ಧಿಯವರಿಲ್ಲ. ಗೃಹಸ್ಥ ವ್ಯವಹಾರದಲ್ಲಿರುತ್ತಾ ಕಾಲಿನಿಂದ ಶಿಖೆಯತನಕ ಈಗ ಖುಷಿಯ ನಶೆ ಇರುತ್ತದೆ, ಕೆಲವರದು ಕಡಿಮೆ, ಕೆಲವರದು ಹೆಚ್ಚು. ಕೆಲವರಿಗೆ ನಯಾ ಪೈಸೆಯಷ್ಟೂ ನಶೆ ಇರುವುದಿಲ್ಲ. ಹಿಟ್ಟಿನಲ್ಲಿ ಉಪ್ಪಿನ ಅಂಶದಷ್ಟು ಇರುತ್ತದೆ, ಅಷ್ಟೆ. ಅವರಿಗೆ ಏನೂ ಅರ್ಥವಾಗಿಲ್ಲವೆಂದು ಅರ್ಥ. ಯಾರಿಗೆ ನಾರಾಯಣಿ ನಶೆ ಏರುತ್ತದೆ ಎಂಬುದು ಗೊತ್ತಾಗುತ್ತದೆ. ಮಾತಾ-ಪಿತರ ಸೇವೆ ಮಾಡುತ್ತಾರೆ. ಗೃಹಸ್ಥ ವ್ಯವಹಾರದಲ್ಲಿ ಇದ್ದು ಸೇವೆ ಮಾಡಲು ಸಾಧ್ಯವಿಲ್ಲ ಎಂದಲ್ಲ. ಅವರು ಇನ್ನಷ್ಟು ಹೆಚ್ಚು ಸೇವೆ ಮಾಡುತ್ತಾರೆ. ಇನ್ನಷ್ಟು ಹೆಚ್ಚು ಮಾತಾ-ಪಿತರ ಹೆಸರನ್ನು ಪ್ರಸಿದ್ಧ ಮಾಡುತ್ತಾರೆ. ಗೃಹಸ್ಥ ವ್ಯವಹಾರದಲ್ಲಿ ಇದ್ದು ಕಮಲಪುಷ್ಪ ಸಮಾನ ಅಚಲ, ಅಡೋಲರಾಗಿ ಮತ್ತೆ ಅನ್ಯರನ್ನು ಮಾಡುತ್ತಾರೆ. ಅವರ ಮಹಿಮೆ ಜಾಸ್ತಿ ಆಗುತ್ತದೆ. ತಾವು ಪ್ರಾರಂಭದಲ್ಲಿ ಬಂದಿರಿ ಅದೂ ಸಹ ಡ್ರಾಮಾ. ಭಟ್ಟಿ ಆಗಬೇಕಿತ್ತು, ಅದರಲ್ಲಿಯೂ ಕೆಲವು-ಕೆಲವು ಬೇಯದ ಇಟ್ಟಿಗೆಗಳು ಇದ್ದವು, ಕೆಲವು ಚೆನ್ನಾಗಿ ಬೆಂದಿದ್ದವು. ಐ.ಸಿ.ಎಸ್ನ ಪರೀಕ್ಷೆಯಲ್ಲಿ ಎಲ್ಲರೂ ಪಾಸ್ ಆಗುತ್ತಾರೆಯೇ ಏಕೆಂದರೆ ಸರಕಾರವು ಬಹಳ ಸಂಬಳ ಕೊಡಬೇಕಾಗುತ್ತದೆ. ಇಲ್ಲೂ ಸಹ ಹಾಗೆಯೇ ಬಹಳ ಆಸ್ತಿ ಕೊಡಬೇಕಾಗುತ್ತದೆ. ಮುಖ್ಯವಾಗಿ 8 ಜನ ಪಾಸ್ ಆಗುತ್ತಾರೆ ಮತ್ತು 108ರ ಮಾಲೆ ಆಗುತ್ತದೆ. ಪುರುಷಾರ್ಥ ಮಾಡಿ ಶ್ರೇಷ್ಠ ಪದವಿಯನ್ನು ಪಡೆಯಬೇಕು. ಮೊದಲ ದರ್ಜೆ, ಹವಾ ನಿಯಂತ್ರಣದ ಟಿಕೆಟ್ನ್ನು ಕಾದಿರಿಸಲಾಗುತ್ತದೆ. ಹವಾ ನಿಯಂತ್ರಣದಲ್ಲಿ ಎಂದೂ ಬಿಸಿ ಹವೆಯು ಬರುವುದಿಲ್ಲ. ನಿಮಗೆ ಈ ಜಗತ್ತಿನ ಯಾವುದೇ ಬಿಸಿ ಹವೆಯ ಅಂದರೆ ಮಾಯೆಯ ಯುದ್ಧವು ಆಗಬಾರದು ಅಥವಾ ತಗಲಬಾರದು. ಅಷ್ಟು ಶಕ್ತಿಶಾಲಿಗಳಾಗಬೇಕು. 8 ಅಂತೂ ಸಂಪೂರ್ಣ ಚೆನ್ನಾಗಿರುತ್ತಾರೆ ಮತ್ತೆ 108ರದು ಮಹಾರಥಿ, ಕುದುರೆ ಸವಾರರು, ಕಾಲಾಳುಗಳು ಎಂಬ ಹೆಸರೂ ಸಹ ಇದೆ. ನಾವು ಯಾವ ಟಿಕೆಟ್ನ್ನು ಖರೀದಿ ಮಾಡುತ್ತಿದ್ದೇವೆ ಎಂಬುದನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬಹುದು. ಪ್ರತಿಯೊಬ್ಬರೂ ಟಿಕೆಟ್ ಪಡೆಯಲೇಬೇಕು. ಪುರುಷರು ತಮ್ಮ ಟಿಕೆಟ್ನ್ನು ಸ್ತ್ರೀಯರು ತಮ್ಮ ಟಿಕೆಟ್ನ್ನು ತೆಗೆದುಕೊಳ್ಳಬೇಕು. ಸ್ತ್ರೀಯರಿಗೆ ಹೆಚ್ಚಾಗಿ ಅವಕಾಶವಿದೆ, ಏಕೆಂದರೆ ಪುರುಷರು ಏನೇ ಮಾಡಿದರು ಅದರಲ್ಲಿ ಅರ್ಧ ಭಾಗ ಸ್ತ್ರೀಯರಿಗೇ ಸಿಗುತ್ತದೆ, ಸ್ತ್ರೀಯರು ಏನೇ ವ್ಯಾಪಾರ ಮಾಡಿದರೆ ಅದನ್ನು ಪತಿಗೆ ಕೊಡುವುದಿಲ್ಲ. ಏಕೆಂದರೆ ಪುರುಷ ರಚಯಿತನಾಗಿದ್ದಾನೆ, ಅವರ ಬಳಿಯೇ ಹಣವಿರುತ್ತದೆ. ಅವರು ಏನೇ ಮಾಡಿದರೂ ಸ್ತ್ರೀಯರಿಗೆ ಅದರಲ್ಲಿ ಅರ್ಧ ಪಾಲು ಸಿಗುತ್ತದೆ. ಸ್ವರ್ಗದಲ್ಲಿ ಇಬ್ಬರೂ ಮಾಲೀಕರಾಗಿರುತ್ತಾರೆ. ಮಗ ಒಬ್ಬನಿರುತ್ತಾನೆ ಆಸ್ತಿಯನ್ನೂ ಸಹ ಆ ಮಗನೇ ತೆಗೆದುಕೊಳ್ಳುತ್ತಾನೆ. ಕನ್ಯೆಯೂ ಸಹ ತನ್ನ ಆಸ್ತಿಯನ್ನು ನಿಯಮದನುಸಾರ ತೆಗೆದುಕೊಳ್ಳುತ್ತಾಳೆ. ಕಲ್ಪದ ಮೊದಲು ಯಾವ ನಿಯಮ ನಡೆಯುತ್ತಿತ್ತು, ಅದೇ ನಡೆಯುತ್ತದೆ. ಅಲ್ಲಿಯ ರೀತಿ ಸಂಪ್ರದಾಯಗಳ ಬಗ್ಗೆ ಯೋಚಿಸಬೇಡಿ, ಹೇಗೆ ರಾಜಧಾನಿಯು ವರ್ಗಾವಣೆ ಆಗುತ್ತದೆ ಎಂದು ತಂದೆಯು ಬಹಳ ಸಾಕ್ಷಾತ್ಕಾರವನ್ನು ಮಾಡಿಸುತ್ತಾರೆ. ಇಲ್ಲಿ ವರ್ಗಾವಣೆ ಆದಾಗ ಬ್ರಾಹ್ಮಣರು, ಗುರುಗಳು ಮುಂತಾದವರನ್ನು ಕರೆಸುತ್ತಾರೆ. ಆದರೆ ಮೊದಲಿನ ರೀತಿ ಸಂಪ್ರದಾಯಗಳು ಬಹಳ ಚೆನ್ನಾಗಿತ್ತು. ಯಾವಾಗ ವಾನಪ್ರಸ್ಥ ಸ್ಥಿತಿಗೆ ತಲುಪುತ್ತಿದ್ದರೋ ಆಗ ಮಕ್ಕಳನ್ನು ಬಹಳ ಪ್ರೀತಿಯಿಂದ ಸಿಂಹಾಸನದ ಮೇಲೆ ಕೂರಿಸಿ ಈಗ ನೀನೇ ಕಾರ್ಯವ್ಯವಹಾರಗಳನ್ನು ಮಾಡು ಎಂದು ಹೇಳುತ್ತಿದ್ದರು. ಈಗಂತೂ ಬಹಳ ವಯಸ್ಸಾದರೂ ಸಹ ವ್ಯವಹಾರವನ್ನು ಬಿಡುವುದಿಲ್ಲ. ಮೊದಲು ಮಕ್ಕಳು ಮಾತೃ ಸ್ನೇಹಿಗಳಾಗುತ್ತಿದ್ದರು, ಈಗಂತೂ ಮಾತೃದ್ರೋಹಿಗಳಾಗಿಬಿಡುತ್ತಾರೆ. ತಾಯಿಯನ್ನೂ ಸಹ ಜುಟ್ಟನ್ನು ಹಿಡಿದು ಹೊರಗೆ ಹಾಕುತ್ತಾರೆ, ಇಂತಹವರಿಗೆ ಮಾತೃದ್ರೋಹಿಗಳೆಂದು ಹೇಳಲಾಗುತ್ತದೆ. ಸತ್ಯಯುಗದಲ್ಲಿ ಇಂತಹ ಮಾತುಗಳು ಇರುವುದಿಲ್ಲ. ನಿಮಗಂತೂ ಬಹಳ ಖುಷಿ ಆಗಬೇಕು, ಸಭೆಯ ಅನುಭೂತಿ ಇಲ್ಲಿಯೇ ಆಗುತ್ತದೆ. ಜ್ಞಾನಸಾಗರ ಎಲ್ಲಿಯಿರುತ್ತಾರೋ ಅಲ್ಲಿ ಮೇಳವು ನಡೆಯುತ್ತದೆ. ನದಿಗಳ ಮೇಳ (ಮಿಲನ) ಆಗುತ್ತದೆಯಲ್ಲವೇ. ನೀವು ನದಿಗಳಂತೂ ಪರಸ್ಪರ ಸೇರುತ್ತಿರುತ್ತೀರಿ, ಇದು ಜ್ಞಾನಸಾಗರ ಮತ್ತು ನದಿಯ ಮಿಲನವಾಗಿದೆ. ಜಗದಂಬಾ, ಸರಸ್ವತಿಯವರು ಇವರು ಆಗಿದ್ದರು, ಇವರ ಹೆಸರು ಪ್ರಖ್ಯಾತವಾಗಿದೆ. ಮಮ್ಮನ ಬಳಿ ಎಷ್ಟೊಂದು ಜನರು ಮಿಲನ ಮಾಡಲು ಬರುತ್ತಿದ್ದರು ಏಕೆಂದರೆ ಅವರ ಮುರಳಿ ಬಹಳ ಚೆನ್ನಾಗಿ ಇರುತ್ತಿತ್ತು. ಮಕ್ಕಳೂ ಸಹ ಮಮ್ಮಾರವರ ಮುರಳಿಯಲ್ಲಿ ಬಹಳ ಸೆಳೆತವಿರುತ್ತಿತ್ತು ಎನ್ನುವುದು ಅನುಭೂತಿ ಮಾಡುತ್ತೀರಿ. ಇದು ಸಾಗರ ಮತ್ತು ನದಿಯ ಮಿಲನವಾಗಿದೆ, ಬಹಳ ಮಕ್ಕಳು ಬರುತ್ತಾರೆ, ಮೊದಲು ಸಾಗರ ನಂತರ ನದಿಗಳು, ಚಿಕ್ಕನದಿಗಳು ಅಥವಾ ದೊಡ್ಡ ಕಾಲುವೆಗಳು ಮುಂತಾದವುಗಳು ಇರುತ್ತವೆಯಲ್ಲವೆ. ನೀವು ಪ್ರತಿಯೊಬ್ಬರು ತಿಳಿದುಕೊಳ್ಳಬಹುದು - ನಾನು ಚಿಕ್ಕ ನದಿಯೋ ಅಥವಾ ದೊಡ್ಡ ನದಿಯೋ? ದೊಡ್ಡ-ದೊಡ್ಡ ನದಿಗಳನ್ನು ಭಾಷಣ ಮಾಡಲು ಕರೆಯುತ್ತಾರೆ ಅಂದಾಗ ಅವರು ಬಹಳ ಬುದ್ಧಿವಂತರಿದ್ದಾರೆ. ಮಮ್ಮಾರವರನ್ನು ಎಷ್ಟೊಂದು ಕರೆಯುತ್ತಿದ್ದರು. ಶಿವಬಾಬಾರವರಿಂದ ಸಿಕ್ಕಿರುವ ಖಜಾನೆಯನ್ನು ನೀಡಿರಿ ಎಂದು ಕರೆಯುತ್ತಿದ್ದರು. ನೀವು ಮಕ್ಕಳು ಜ್ಞಾನರತ್ನಗಳ ದಾನವನ್ನು ಮಾಡುತ್ತೀರಿ. ಜ್ಞಾನದ ಒಂದೊಂದು ಮಹಾವಾಕ್ಯ ಲಕ್ಷಾಂತರ ರೂಪಾಯಿ ಬೆಲೆವುಳ್ಳಂತಹದ್ದಾಗಿದೆ. ಶಾಸ್ತ್ರಗಳಲ್ಲಿ ಜ್ಞಾನದ ಮಹಾವಾಕ್ಯಗಳೇನೂ ಇರುವುದಿಲ್ಲ, ಒಂದುವೇಳೆ ಇದ್ದಿದ್ದರೆ ಭಾರತವು ಬಹಳ ಸಾಹುಕಾರ ವಾಗಿರುತ್ತಿತ್ತು. ನಿಮಗೀಗ ಎಷ್ಟೊಂದು ರತ್ನಗಳು ಸಿಗುತ್ತವೆ, ಇದರಿಂದ ನೀವು 21 ಜನ್ಮಗಳವರೆಗೆ

ಸಾಹುಕಾರರಾಗಿಬಿಡುತ್ತೀರಿ, ಈಗ ಸಂಗಮಯುಗದಲ್ಲಿ ನೀವು ಎಲ್ಲರಿಗಿಂತ ಶ್ರೇಷ್ಠರಾಗಿದ್ದೀರಿ ನಂತರ ಸತ್ಯ-ತ್ರೇತಾಯುಗದಲ್ಲಿ ನಿಮ್ಮ ಪದವಿ ಕಡಿಮೆ ಆಗುತ್ತದೆ. ನೀವು ಈಗ ಈಶ್ವರೀಯ ದರ್ಬಾರಿನಲ್ಲಿ ಕುಳಿತಿದ್ದೀರಿ, ತಂದೆಯು ನಿಮಗೆ 21 ಜನ್ಮದ ಆಸ್ತಿಯನ್ನು ಕೊಡಲು ಬಂದಿದ್ದಾರೆ ಎಂಬುದು ತಿಳಿದಿದೆ. ಅವರನ್ನೇ ಎಲ್ಲರೂ ನೆನಪು ಮಾಡುತ್ತಾರೆ, ಉಳಿದವರೆಲ್ಲರೂ ಸಹ ದುಃಖವನ್ನು ಕೊಡುವಂತಹವರಾಗಿದ್ದಾರೆ, ದುಃಖವನ್ನು ಕೊಡುವವರನ್ನು ಸದಾ ಕಾಲಕ್ಕೆ ಮರೆಯುತ್ತಾರೆ. ಹೇ! ತಂದೆ, ನಮ್ಮವರಂತೂ ನೀವಾಗಿದ್ದೀರಿ, ಬೇರೆ ಯಾರೂ ಇಲ್ಲ, ಕೃಷ್ಣನ ಹೆಸರನ್ನು ಕೇಳಿದರೆಂದರೆ ಅವರನ್ನು ನೆನಪು ಮಾಡುತ್ತಾರೆ. ನೀವು ಕೃಷ್ಣನ ರಾಜಧಾನಿಯಲ್ಲಿ ಇದ್ದೀರಿ, ತಂದೆಯು ಈ ಕಂಸಪುರಿಯನ್ನು ಕೃಷ್ಣಪುರಿಯನ್ನಾಗಿ ಮಾಡುತ್ತಾರೆ. ಆಸುರಿಪುರಿಯಿಂದ ದೈವೀಪುರಿಯಾಗಿಬಿಡುತ್ತದೆ. ಆಸುರರಿಗೂ ಮತ್ತು ದೇವತೆಗಳಿಗೂ ಯುದ್ಧವಾಯಿತೆಂದು, ದೇವತೆಗಳಿಗೆ ಜಯವಾಯಿತೆಂದು ತೋರಿಸಿದ್ದಾರೆ. ದೇವತೆಗಳು ಸ್ವರ್ಗದಲ್ಲಿ ಇರುತ್ತಾರೆ. ವಾಸ್ತವದಲ್ಲಿ ಪಂಚವಿಕಾರಗಳೊಂದಿಗೆ ನಿಮ್ಮಯುದ್ಧವಾಗಿದೆ. ದಸರಾ ಬರುತ್ತಿರುವುದರಿಂದ ಈಗ ರಾಮಾಯಣದ ಕಡೆ ಒಲವು ಮೂಡುತ್ತದೆ. ಸರಕಾರವೂ ಸಹ ದಸರಾವನ್ನು ಆಚರಿಸುತ್ತದೆ, ರಾಮಲೀಲೆಯನ್ನು ಮಾಡುತ್ತಾರೆ. ಆದರೆ ರಾವಣ ಅಂದರೆ ಏನೆಂದು ತಿಳಿದಿಲ್ಲ.

ಕೆಲವು ಮಕ್ಕಳು ಧ್ಯಾನದಲ್ಲಿ ಕೂರಿಸಿ ಎಂದು ಹೇಳುತ್ತಾರೆ, ವಾಸ್ತವದಲ್ಲಿ ನೆನಪನ್ನು ನಡೆಯುತ್ತಾ-ತಿರುಗಾಡುತ್ತಾ ಮಾಡಬೇಕಾಗಿದೆ. ಯಾರು ಇಡೀ ದಿನ ನೆನಪು ಮಾಡುವುದಿಲ್ಲವೋ ಅವರನ್ನು ಕೂರಿಸಲಾಗುತ್ತದೆ ಏಕೆಂದರೆ ಕುಳಿತುಕೊಳ್ಳುವುದರಿಂದ ಅಲ್ಪ-ಸ್ವಲ್ಪ ನೆನಪು ಮಾಡುತ್ತಾರೆ. ಬಹಳಷ್ಟು ಜನ ಸೇವಾಕೇಂದ್ರದಲ್ಲಿ ಬಂದಾಗ ನೆನಪು ಮಾಡುತ್ತಾರೆ. ಮನೆಗೆ ಹೋದರೆ ನೆನಪು ಮರೆತುಹೋಗುತ್ತದೆ. ನೆನಪು ಮಾಡುವ ಅಭ್ಯಾಸವೇ ಮಾಡುವುದಿಲ್ಲ. ಅಲ್ಲಿ-ಇಲ್ಲಿ ಅಲೆಯುತ್ತಿರುತ್ತದೆ. ಆತ್ಮ ನಕ್ಷತ್ರದ ಸಮಾನವಾಗಿದೆ, ಅದನ್ನೇ ಬಿಂದು ಎಂದು ಹೇಳಲಾಗುತ್ತದೆ ಎಂಬುದನ್ನು ಮಕ್ಕಳಿಗೆ ತಿಳಿಸಲಾಗಿದೆ. ನಕ್ಷತ್ರದ ಚಿತ್ರದಲ್ಲಿ ಮೂಲೆಗಳಿರುತ್ತವೆ, ಬಿಂದುವಿನಲ್ಲಿ ಇರುವುದಿಲ್ಲ. ಹೋಲಿಕೆ ಮಾಡುವ ಸಲುವಾಗಿ ನಕ್ಷತ್ರವೆಂದು ಹೇಳಲಾಗುತ್ತದೆ. ಅದೃಷ್ಟ ನಕ್ಷತ್ರವೆಂದು ಹೇಳಲಾಗುತ್ತದೆ. ಬಿಂದುರೂಪ ಆತ್ಮನಲ್ಲಿ ಜ್ಞಾನದ ಹೊಳಪು ಇದೆ ಆತ್ಮ ಬಿಂದುವಿನಲ್ಲಿ ಎಲ್ಲಾ ಪಾತ್ರವಿದೆ. ತಂದೆಯು ತಿಳಿಸುತ್ತಾರೆ ನಾನು ಬಿಂದುವಿನಲ್ಲಿ ಈ ಪಾತ್ರವಿದೆ, ಅದನ್ನು ನಾನು ಭಕ್ತಿಯಲ್ಲಿ ಅಭಿನಯಿಸುತ್ತಾ ಬಂದಿದ್ದೇನೆ. ನೀವು ಮಕ್ಕಳದು ಎಲ್ಲರಿಗಿಂತ ಹೆಚ್ಚು ಪಾತ್ರವಿದೆ ಏಕೆಂದರೆ ನೀವು ಸಂಪೂರ್ಣಚಕ್ರವನ್ನು ಸುತ್ತುತ್ತೀರಿ. ಚಕ್ರವರ್ತಿ ರಾಜರೂ ಸಹ ನೀವೇ ಆಗುತ್ತೀರಿ. ದುಃಖವಿರಲಿ ಅಥವಾ ಸುಖವಿರಲಿ ನೀವೇ ಪಡೆಯುತ್ತೀರಿ, ನನ್ನ ಪಾತ್ರ ನಿಮ್ಮಷ್ಟು ಇರುವುದಿಲ್ಲ. ನಾನು ವಾನಪ್ರಸ್ಥದಲ್ಲಿ ಹೊರಟುಹೋಗುತ್ತೇನೆ ನಂತರ ಭಕ್ತಿಮಾರ್ಗದಲ್ಲಿ ನನ್ನ ಸೇವೆ ಪ್ರಾರಂಭವಾಗುತ್ತದೆ, ನೆನಪನ್ನೂ ಸಹ ಮಾಡುತ್ತಾರೆ, ಡ್ರಾಮಾನುಸಾರ ಯಾವ-ಯಾವ ದೇವತೆಗಳ ಪೂಜೆಯನ್ನು ಮಾಡುತ್ತಾರೋ ಅವರ ಸಾಕ್ಷಾತ್ಕಾರವನ್ನಂತೂ ನಾನೇ ಮಾಡಿಸುತ್ತೇನೆ. ಇದು ಡ್ರಾಮಾದಲ್ಲಿ ನನ್ನ ಪಾತ್ರವಾಗಿದೆ, ನಮಗೆ ಇವರಿಂದ ಸಾಕ್ಷಾತ್ಕಾರವಾಯಿತು ಎಂದು ತಿಳಿಯುತ್ತಾರೆ. ಇವರಲ್ಲಿಯೂ ಸಹ ಭಗವಂತನಿದ್ದಾರೆ, ಗಣೇಶನ ಸಾಕ್ಷಾತ್ಕಾರವಾದರೆ ಗಣೇಶನಲ್ಲೂ ಪರಮಾತ್ಮನಿದ್ದಾರೆಂದು ತಿಳಿಯುತ್ತಾರೆ. ಇದರಿಂದಲೇ ಸರ್ವವ್ಯಾಪಿಯ ಜ್ಞಾನವನ್ನು ತೆಗೆದುಕೊಳ್ಳಲಾಗಿದೆ. ನಾವೆಲ್ಲರೂ ತಂದೆಯನ್ನು ನೆನಪು ಮಾಡುತ್ತೇವೆ ಅರ್ಥಾತ್ ನಮ್ಮಲ್ಲಿ ತಂದೆಯ ನೆನಪಿದೆ ಎಂದು ನೀವು ಮಕ್ಕಳು ಹೇಳುತ್ತೀರಿ, ಅಂದರೆ ಎಲ್ಲರಲ್ಲೂ ಬಾಬಾನ ನೆನಪಿದೆ ಅಂದಾಗ ಇದರಿಂದಲೂ ಸರ್ವವ್ಯಾಪಿ ಎಂದು ತಿಳಿದು ಕ್ಕೊಳ್ಳುತ್ತಾರೆ. ನನ್ನ ನೆನಪಿನಲ್ಲಿ ನಂಬರ್ವಾರ್ ಪುರುಷಾರ್ಥದ ಅನುಸಾರವಾಗಿ ಇರುತ್ತೀರೆಂದು ತಂದೆಯು ಹೇಳುತ್ತಾರೆ. ಯಾರು ಎಷ್ಟು ನೆನಪು ಮಾಡುತ್ತಾರೆಯೋ ಅಷ್ಟು ವಿಕರ್ಮ ವಿನಾಶವಾಗುತ್ತದೆ. ಆತ್ಮವಂತೂ ಪ್ರತಿಯೊಬ್ಬರಲ್ಲಿ ವ್ಯಾಪಕವಾಗಿದೆ, ನಾನು ಕೆಲವು ಮಕ್ಕಳಲ್ಲಿ ಪ್ರವೇಶಮಾಡಿ ಯಾರದಾದರೂ ಕಲ್ಯಾಣ ಮಾಡಬಹುದಾಗಿದೆ, ಆದರೆ ಅವರು ಉಲ್ಟ ಅರ್ಥಮಾಡಿಕೊಂಡಿದ್ದಾರೆ ಡ್ರಾಮಾದಲ್ಲಿ ಅದೂಸಹ ನಿಗಧಿಯಾಗಿದೆ. ಡ್ರಾಮಾನುಸಾರ ಪ್ರತಿಯೊಬ್ಬರಿಗೂ ಪಾತ್ರ ಸಿಕ್ಕಿದೆ, ಶಾಸ್ತ್ರ ಮುಂತಾದವುಗಳನ್ನು ಮಾಡುವುದೂ ಸಹ ಡ್ರಾಮಾದಲ್ಲಿ ಪಾತ್ರವಿದೆ. ಯಾರು ಕಲ್ಪದ ಹಿಂದೆ ಶಾಸ್ತ್ರಗಳನ್ನು ಮಾಡಿದ್ದರೋ ಅವರೇ ನಂತರ ಮಾಡುತ್ತಾರೆ. ಗೀತೆಯನ್ನು ತಿಳಿಸುವವರು ಮತ್ತೆ ಕಲ್ಪದ ನಂತರ ಹಾಗೆಯೇ ತಿಳಿಸುತ್ತಾರೆ. ಈಗ ಮಕ್ಕಳ ಸಭೆಯಲ್ಲಿ ತಂದೆಯು ಕುಳಿತಿದ್ದಾರೆ. ಯಾರು ನನ್ನನ್ನು ತಿಳಿದುಕೊಳ್ಳುತ್ತಾರೆಯೋ, ನಾನು ಅವರ ಮಧ್ಯದಲ್ಲಿಯೇ ಶೋಭಿಸುತ್ತೇನೆ. ಯಾರು ನನ್ನನ್ನು ತಿಳಿದುಕೊಳ್ಳುವುದಿಲ್ಲವೋ ಅವರ ಸಭೆಯಲ್ಲಿ ಕುಳಿತು ಏನು ಮಾಡಲಿ? ನೀವು ಭಾಷಣ ಮಾಡಿದಾಗ ಅನೇಕರು ಬರುತ್ತಾರೆ, ಅದನ್ನು ಜ್ಯೋತಿಯ ಜೊತೆ ಪತಂಗಗಳ ಸಭೆ ಎಂದು ಕರೆಯುವುದಿಲ್ಲ. ಜ್ಯೋತಿಯ ಜೊತೆ ಸಭೆ ಇದಾಗಿದೆ. ಕೆಲವರು ಬಲಿ ಆಗುತ್ತಾರೆ, ಮತ್ತೆ ಬುದ್ಧಿಯೋಗ ಬೇರೆಕಡೆ ಹೊರಟು ಹೋಗುತ್ತದೆ. ಸಂಪೂರ್ಣ ಆಗುವವರೆಗೂ ಬುದ್ಧಿಯೂ ಹೋಗುತ್ತಿರುತ್ತದೆ. ಕರ್ಮಾತೀತ ಅವಸ್ಥೆ ಸಂಪೂರ್ಣ ನಿರ್ವಿಕಾರಿ ಸ್ಥಿತಿ ಈಗಿರಲು ಸಾಧ್ಯವಿಲ್ಲ. ಇದು ಅಂತ್ಯದಲ್ಲಿ ಇರುತ್ತದೆ ನಂತರ ಈ ಹಳೆಯ ಶರೀರ ಬಿಟ್ಟು ಹೋಗುತ್ತದೆ. ಇದು ಹಳೆಯ ಶರೀರವಾಗಿದೆ ಆತ್ಮ ಈ ಹಳೆಯ ಕರ್ಮೇಂದ್ರಿಯಗಳ ಜೊತೆ ಕಾರ್ಯವನ್ನು ಮಾಡುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಶಿವತಂದೆಯಿಂದ ಸಿಕ್ಕಿರುವ ಖಜಾನೆಗಳನ್ನು ಹಂಚಬೇಕಾಗಿದೆ. ಅವಿನಾಶಿ ಜ್ಞಾನರತ್ನಗಳ ದಾನ ಮಾಡಿ 21 ಜನ್ಮಗಳವರೆಗೆ ಶ್ರೀಮಂತರಾಗಬೇಕಾಗಿದೆ.

2. ತಮ್ಮ ಸ್ಥಿತಿಯನ್ನು ಅಚಲ, ಅಡೋಲ ಮಾಡಿಕೊಳ್ಳಬೇಕಾಗಿದೆ. ಗೃಹಸ್ಥ ವ್ಯವಹಾರದಲ್ಲಿ ಇರುತ್ತಾ ಕಮಲಪುಷ್ಪ ಸಮಾನರಾಗಿ ತಂದೆಯ ಹೆಸರನ್ನು ಪ್ರಸಿದ್ಧ ಮಾಡಬೇಕಾಗಿದೆ. ಸೇವೆಯಲ್ಲಿ ತತ್ಪರರಾಗಬೇಕಾಗಿದೆ.

ವರದಾನ: ಸಂಗಮಯುಗದ ಈ ಹೊಸ ಯುಗದಲ್ಲಿ ಪ್ರತಿ ಸೆಕೆಂಡ್ ನವೀನತೆಯ ಅನುಭವ ಮಾಡುವಂತಹ ಫಾಸ್ಟ್ ಪುರುಷಾರ್ಥಿ ಭವ.

ಸಂಗಮಯುಗದಲ್ಲಿ ಎಲ್ಲವೂ ಸಹ ಹೊಸದಾಗಿ ಬಿಡುವುದು, ಆದ್ದರಿಂದ ಇದನ್ನು ಹೊಸಯುಗ ಎಂದೂ ಸಹ ಹೇಳಲಾಗುವುದು. ಇಲ್ಲಿ ಏಳುವುದರಲ್ಲೂ ಹೊಸದು, ಮಾತನಾಡುವುದೂ ಸಹ ಹೊಸ ತರಹ, ನಡೆಯುವುದು ಹೊಸ ತರ. ಹೊಸದು ಅರ್ಥಾತ್ ಅಲೌಕಿಕ. ಸ್ಮೃತಿಯಲ್ಲಿಯೂ ಸಹ ನವೀನತೆ ಬಂದು ಬಿಟ್ಟಿದೆ. ಮಾತುಗಳು ಸಹ ಹೊಸದು, ಮಿಲನ ಮಾಡುವುದೂ ಸಹ ಹೊಸದು, ನೋಡುವುದೂ ಹೊಸದು, ನೋಡಬೇಕಾದರೆ ಆತ್ಮ, ಆತ್ಮವನ್ನೇ ನೋಡುವುದು, ಶರೀರವನ್ನಲ್ಲ. ಭಾಯಿ-ಭಾಯಿಯ ದೃಷ್ಟಿಯಿಂದ ಸಂಪರ್ಕದಲ್ಲಿ ಬರುವುದು, ದೈಹಿಕ ಸಂಬಂಧದಿಂದಲ್ಲ. ಈ ರೀತಿ ಪ್ರತಿ ಸೆಕೆಂಡ್ ತಮ್ಮಲ್ಲಿ ನವೀನತೆಯ ಅನುಭವ ಮಾಡಬೇಕು, ಒಂದು ಸೆಕೆಂಡ್ನ ಹಿಂದೆ ಏನು ಅವಸ್ಥೆ ಇತ್ತು. ಅದು ಇನ್ನೊಂದು ಸೆಕೆಂಡ್ ಇಲ್ಲ. ಅದಕ್ಕಿಂತಲೂ ಮುಂದೆ ಇರಬೇಕು ಇದಕ್ಕೇ ಫಾಸ್ಟ್ ಪುರುಷಾರ್ಥಿ ಎಂದು ಹೇಳಲಾಗುವುದು.

ಸ್ಲೋಗನ್: ಪರಮಾತ್ಮನ ಪ್ರೀತಿಯ ಮುಖಾಂತರ ಜೀವನದಲ್ಲಿ ಸದಾ ಅತೀಂದ್ರಿಯ ಸುಖ ಅಥವಾ ಆನಂದದ ಅನುಭೂತಿ ಮಾಡುವುದೇ ಸಹಜಯೋಗವಾಗಿದೆ.